This question paper consists of **12pages**, including **31questions.**
ಈ ಪ್ರಶ್ನೆಪತ್ರಿಕೆಯಲ್ಲಿ **31** ಪ್ರಶ್ನೆಗಳಿದ್ದು **12** ಮುದ್ರಿತ ಪುಟಗಳನ್ನು ಹೊಂದಿದೆ.

**Roll No.**
ರೋಲ್ ನಂ.

| | | | | | | | | | | | |
|---|---|---|---|---|---|---|---|---|---|---|---|
| | | | | | | | | | | | |

# KANNADA
# ಕನ್ನಡ
# (208)

**Code No. 64/S/O/K**

**Set A**

**Day and Date of Examination** ..............................................................................
ಪರೀಕ್ಷೆಯ ದಿನ ಮತ್ತು ತಾರೀಖು

**Signature of Invigilators 1.** ..........................................
ಉಸ್ತುವಾರಿದಾರರ ರುಜು **2.** ..........................................

## ಸಾಮಾನ್ಯ ಸೂಚನೆಗಳು :

1. ವಿದ್ಯಾರ್ಥಿಗಳು ಪ್ರಶ್ನೆಪತ್ರಿಕೆಯ ಮೊದಲ ಪುಟದಲ್ಲಿ ತಮ್ಮ ರೋಲ್ ನಂಬರ್ ಬರೆಯಬೇಕು.
2. ನಿಮಗೆ ಕೊಟ್ಟಿರುವ ಪ್ರಶ್ನೆಪತ್ರಿಕೆಯ ಮೊದಲ ಮೇಲ್ಭಾಗದಲ್ಲಿ ಕೊಟ್ಟಿರುವ ಒಟ್ಟು ಪುಟಗಳ ಸಂಖ್ಯೆ ಹಾಗೂ ಒಟ್ಟು ಪ್ರಶ್ನೆಗಳ ಸಂಖ್ಯೆಗೆ ತಕ್ಕಂತೆ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳೂ ಹಾಗೂ ಪ್ರಶ್ನೆಗಳು ಮುದ್ರಿತವಾಗಿದೆಯೇ ಎಂದು ಪರೀಕ್ಷಿಸಿ, ಪ್ರಶ್ನೆಗಳ ಕ್ರಮಸಂಖ್ಯೆ ಸರಿಯಾಗಿದೆಯೇ ಎಂದು ಪರೀಕ್ಷಿಸಿ.
3. ವಸ್ತುನಿಷ್ಠ ಪ್ರಶ್ನೆಗಳಿಗೆ ಸೂಕ್ತ ಉತ್ತರವನ್ನು ಪ್ರಶ್ನೆಯ ಜೊತೆಯಲ್ಲಿ ನೀಡಿರುವ ಉತ್ತರಗಳಿಂದಲೇ ಆರಿಸಿಕೊಳ್ಳಬೇಕು. ನಿಮಗೆ ಕೊಟ್ಟಿರುವ ಬೇರೆ ಉತ್ತರ ಪತ್ರಿಕೆಯಲ್ಲಿ ಸರಿಯಾದ ಉತ್ತರ ಸಂಖ್ಯೆ **(A), (B), (C), (D)** ಯನ್ನು ಬರೆಯಬೇಕು.
4. ಎಲ್ಲಾ ಪ್ರಶ್ನೆಗಳಿಗೂ ನಿರ್ದಿಷ್ಟ ಸಮಯದಲ್ಲಿಯೇ ಉತ್ತರ ಬರೆಯಬೇಕು. ವಸ್ತುನಿಷ್ಠ ಪ್ರಶ್ನೆಗಳಿಗೆ ಬೇರೆ ಸಮಯವನ್ನು ನೀಡಲಾಗುವುದಿಲ್ಲ.
5. ನಿಮ್ಮ ಉತ್ತರ ಪತ್ರಿಕೆಯಲ್ಲಿ ಕೊಟ್ಟಿರುವ ನಿರ್ದಿಷ್ಟ ಜಾಗದಲ್ಲಿ ಮಾತ್ರ ನಿಮ್ಮ ರೋಲ್ ನಂಬರ್ ಬರೆಯಬೇಕು. ಹಾಗಲ್ಲದೇ ಬೇರೆ ಎಲ್ಲಿಯೂ ನಿಮ್ಮ ಗುರುತು ನೀಡಬಹುದಾದ ನಿಮ್ಮ ರೋಲ್ ನಂಬರ್ ಅನ್ನು ಬರೆಯಕೂಡದು. ಒಂದು ವೇಳೆ ಹಾಗೇನಾದರೂ ಕಂಡುಬಂದಲ್ಲಿ ಅಂತಹ ವಿದ್ಯಾರ್ಥಿಗಳನ್ನು ಅನರ್ಜಿತಗೊಳಿಸಲಾಗುವುದು.
6. ನಿಮ್ಮ ಪ್ರಶ್ನೆ ಪತ್ರಿಕೆಯ ಕೋಡ್ ನಂಬರ್ **64/S/O/K-A** ಉತ್ತರ ಪತ್ರಿಕೆಯಲ್ಲಿ ಬರೆಯಿರಿ.

# KANNADA

# ಕನ್ನಡ

**(208)**

**ಸಮಯ : 3 ಗಂಟೆಗಳು** **ಗರಿಷ್ಠ ಅಂಕ : 100**

**ಸೂಚನೆಗಳು :** (1) ಎಲ್ಲಾ ಪ್ರಶ್ನೆಗಳಿಗೆ ಉತ್ತರಗಳನ್ನು ಉತ್ತರ ಪುಸ್ತಕದಲ್ಲೇ ಬರೆಯಿರಿ.

(2) ಪ್ರಶ್ನೆ ಮತ್ತು ಉಪ–ಪ್ರಶ್ನೆಗಳ ಸಂಖ್ಯೆಗಳನ್ನು ಸರಿಯಾಗಿ ಬರೆಯಿರಿ.

(3) ಪ್ರಶ್ನೆ **1** ರಿಂದ **11** ರವರೆಗೆ **4** ಆಯ್ಕೆಗಳನ್ನು ಕೊಡಲಾಗಿದೆ. ಅತ್ಯಂತ ಸೂಕ್ತವಾದುದನ್ನು ಆಯ್ಕೆ ಮಾಡಿ ಉತ್ತರಿಸಿರಿ.

**1.** ಮಲೆನಾಡಿನಲ್ಲಿ 'ಮೈಲಿ' ಎನ್ನುವುದು ಬಯಲು ಸೀಮೆಯಲ್ಲಿ ___________. **1**

(A) ಮೂರ್ಛೆರೋಗ (B) ಧನುರ್ವಾಯು

(C) ಮಲೇರಿಯಾ (D) ದೊಡ್ಡಮ್ಮ ರೋಗ

**2.** ಭರತ ಭೂಮಿ ನನ್ನ ___________. **1**

(A) ತಂದೆ (B) ತಾಯಿ (C) ದೇವರು (D) ಅಜ್ಜ

**3.** 'ಓಟುರುಕ' ಎಂಬುದೊಂದು ___________. **1**

(A) ನೀರು ಕುದುರೆ (B) ಓತಿಕ್ಯಾತ (C) ಕೆಸರಿನ ಆಮೆ (D) ಮೊಸಳೆ

**4.** ರಾಜನ ಮಗನ ಕಿವಿ ___________. **1**

(A) ಅವನದೇ ಆಗಿತ್ತು (B) ಕಿರುಬನದಾಗಿತ್ತು

(C) ಕತ್ತೆಯದಾಗಿತ್ತು (D) ಹಂದಿಯದಾಗಿತ್ತು

5. ನಂಬಿಗೀಲೆ ತುಂಬ್ಯsದ ನಮ್ಮ___________. 1

(A) ಬಾಳು (B) ಜೀವನ (C) ಬದುಕು (D) ಸಂಸಾರ

6. ಶಾಲುಸಾಬಿಯ ಎತ್ತರ ___________. 1

(A) ಮೂರಡಿ (B) ಆರಡಿ (C) ಆರುಗೇಣು (D) ಐದು ಫೂಟು

7. ಕ್ಷಯ ರೋಗಕ್ಕೆ___________ ತಿಂಗಳು ಔಷಧಿ ಸೇವಿಸಬೇಕು. 1

(A) 3 ತಿಂಗಳು (B) 18 ತಿಂಗಳು (C) 5 ತಿಂಗಳು (D) 21 ತಿಂಗಳು

8. ಲೋಕದೊಳಗೆ ಹುಟ್ಟಿದ ಬಳಿಕ ___________ ಬರುತ್ತವೆ. 1

(A) ಹೊಗಳಿಕೆಗಳು (B) ತೆಗಳಿಕೆಗಳು

(C) ಸ್ತುತಿ – ನಿಂದೆಗಳು (D) ರೂಪಾಯಿಗಳು

9. ಶೋಲಿಗರು ___________ ಮಕ್ಕಳು. 1

(A) ಬಿಲ್ಲಯ್ಯನ (B) ಕಾರಯ್ಯನ (C) ಶ್ರೀಮಂತರ (D) ಶಂಕಮ್ಮನ

10. ಬಸವಣ್ಣ ಅವರು ___________ ಧರ್ಮದ ಮೂಲವೆಂದಿದ್ದಾರೆ. 1

(A) ಭಕ್ತಿಯೇ (B) ಕಾಯಕವೇ (C) ದಯವೇ (D) ದಾನವೇ

11. ಜಲವೇ ಸಕಲ ಕುಲಕೆ ___________. 1

(A) ತಾಯಲ್ಲವೆ (B) ತಂಗಿಯಲ್ಲವೆ

(C) ತಂದೆಯಲ್ಲವೆ (D) ಅಕ್ಕನಲ್ಲವೆ

12. ಕೊಟ್ಟ ಗದ್ಯ ಭಾಗವನ್ನು ಓದಿಕೊಂಡು ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿರಿ.

ಅಭಿವೃದ್ಧಿ ಪಥದಲ್ಲಿ ಮುಂದುವರಿಯುತ್ತಿರುವ ರಾಷ್ಟ್ರಗಳಲ್ಲಿ ಅಗ್ರವಾಗಿರುವ ಭಾರತಕ್ಕೆ "ಶಿಕ್ಷಣದ ಸಾರ್ವತ್ರೀಕರಣ" ಅಗತ್ಯವಾಗಿದೆ. ಆದರೆ ಉತ್ತಮ ಗುಣಮಟ್ಟದ ಶಿಕ್ಷಣವನ್ನು ನಾನಾ ಭಾಷೆ ಮತ್ತು ಸಂಸ್ಕೃತಿಯನ್ನೊಳಗೊಂಡ ವಿಶಾಲವಾದ ನಮ್ಮ ದೇಶದ ಪ್ರತಿಯೊಂದು ಗ್ರಾಮಾಂತರ ಪ್ರದೇಶಕ್ಕೆ ಒದಗಿಸುವುದು ಅತ್ಯಂತ ಕಷ್ಟಕರವಾದ ಕಾರ್ಯವಾಗಿದೆ.

ಆದರೂ ಈ ಸಮಸ್ಯೆಯ ಪರಿಹಾರಕ್ಕೆ ಉಪಗ್ರಹಗಳನ್ನಾಧರಿಸಿದ ಶಿಕ್ಷಣದ ಪ್ರಯೋಗಗಳು ಉತ್ತೇಜನ ನೀಡಿವೆ. ಇತ್ತೀಚೆಗೆ ಶಿಕ್ಷಣಕ್ಕಾಗಿಯೇ ಮುಡುಪಾಗಿರುವ 'ಎಜುಸ್ಯಾಟ್' ಎಂಬ ಉಪಗ್ರಹವನ್ನು ಯಶಸ್ವಿಯಾಗಿ ಹಾರಿಬಿಡಲಾಗಿದೆ. ಇಡೀ ದೇಶದ ಎಲ್ಲಾ ಭಾಗಗಳಿಗೂ ತಂತ್ರಜ್ಞಾನದ ಮುಖಾಂತರ ವಿಚಾರ – ವಿನಿಮಯ ಹಾಗೂ ಸಂಪರ್ಕಗಳನ್ನೊಳಗೊಂಡ ಶೈಕ್ಷಣಿಕ ಪ್ರಸಾರ ಮತ್ತು ಸೇವೆಯನ್ನು ಒದಗಿಸುವುದು, ಈ ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿದೆ. ಇದರಿಂದಾಗಿ ನಾವಿಂದು ಇಡೀ ದೇಶದಲ್ಲಿ ಶಿಕ್ಷಣ ಪ್ರಸಾರದ ಕ್ರಾಂತಿಯನ್ನು ಸಾಧಿಸುತ್ತಾ ದಾಪುಗಾಲು ಇಟ್ಟಿದ್ದೇವೆ. ಉತ್ತಮ ಶಿಕ್ಷಕರು ನಡೆಸಿಕೊಡುವ ತರಗತಿಯ ಪಾಠಗಳನ್ನು ಎಲ್ಲಾ ಗ್ರಾಮಾಂತರ ಪ್ರದೇಶಗಳಿಗೂ ಸೇರಿದಂತೆ ಇಡೀ ದೇಶಕ್ಕೆ ಉಪಗ್ರಹಗಳಿಂದ ಪ್ರಸಾರ ಮಾಡಲಾಗುತ್ತಿದೆ ಹೀಗಾಗಿ ಉಪಗ್ರಹ ಆಧಾರಿತ ದೂರ ಶಿಕ್ಷಣವು ವಿದ್ಯಾಪ್ರಸಾರಕ್ಕೆ ಒಂದು ವರವಾಗಿ ಪರಿಣಮಿಸಿದೆ.

ಪ್ರಶ್ನೆಗಳು :

(1) ಯಾವ ಪಥದಲ್ಲಿ ರಾಷ್ಟ್ರಗಳು ಮುಂದುವರಿಯುತ್ತಿವೆ ? **1**

(A) ಬೀಳುವ (B) ಅಭಿವೃದ್ಧಿ

(C) ನಾಶನದ (D) ಕಷ್ಟಕರವಾದ

(2) ಶಿಕ್ಷಣಕ್ಕಾಗಿಯೇ ಮುಡುಪಾಗಿರುವ ಉಪಗ್ರಹ ________. **1**

(A) ಎಜುಸ್ಯಾಟ್ (B) ಮೆನುವ್ಯಾಟ್

(C) ಎಜುಕ್ಯಾಟ್ (D) ಕಮುನಿಕ್ಯಾಟ್

(3) ಅಭಿವೃದ್ಧಿ ಪಥದಲ್ಲಿ ಸಾಗುತ್ತಿರುವ ಭಾರತಕ್ಕೆ ಯಾವುದು ಅಗತ್ಯವಾಗಿದೆ ? **1**

(4) 'ಎಜುಸ್ಯಾಟ್' ಕಾರ್ಯಕ್ರಮದ ಮುಖ್ಯ ಉದ್ದೇಶವೇನು ? **2**

(5) ಗ್ರಾಮಾಂತರ ಪ್ರದೇಶಗಳಿಗೆ ಯಾವುದನ್ನು ಒದಗಿಸುವುದು ಕಷ್ಟವಾಗಿದೆ ? **2**

(6) ನಮ್ಮ ದೇಶ ಏನನ್ನು ಒಳಗೊಂಡಿದೆ ? **1**

(7) ಇಡೀ ದೇಶಕ್ಕೆ ಉಪಗ್ರಹಗಳಿಂದ ಏನನ್ನು ಪ್ರಸಾರ ಮಾಡಲಾಗುತ್ತಿದೆ ? **2**

(8) ಗ್ರಾಮಾಂತರ ಪ್ರದೇಶಗಳ ಸಮಸ್ಯೆಗೆ ಯಾವ ಪರಿಹಾರವನ್ನು ನೀಡಲಾಗಿದೆ ? **2**

(9) ವಿದ್ಯಾ ಪ್ರಸಾರಕ್ಕೆ ಯಾವುದು ವರವಾಗಿ ಪರಿಣಮಿಸಿದೆ ? **1**

**13.** ಕೊಟ್ಟಿರುವ ಪದ್ಯವನ್ನು ಓದಿರಿ, ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿರಿ.

ಒಂದು ರೀತಿಯಲ್ಲಿ ಈ ಬದುಕೆಲ್ಲವೂ
ಗಡಿನಾಡ ಯುದ್ಧ
ಜಾತಿಯ ಗಡಿ, ನೀತಿಯ ಗಡಿ
ದೇಶದ ಗಡಿ, ಭಾಷೆಯ ಗಡಿ
ವರ್ಣದ ಗಡಿ, ಪಂಥದ ಗಡಿ
ಹೆಜ್ಜೆ ಹೆಜ್ಜೆಗೂ ಒಳಗೂ ಹೊರಗೂ
ಗಡಿ ಗುರುತಿನ ಒಳಗೋಡೆ
ಕಾವಲು ನಿಂತಿರುವ ಪಂಡಿತರೂ ಶಾಸ್ತ್ರಿಗಳೂ
ಸೈನಿಕರು ಎಲ್ಲಾ ಕಡೆ
ದಾಟಲು ಹೋಗುವೆಯಾ ಓ ನಿಸ್ಸೀಮ ?
ತರ್ಕದ ವಾದದ ಗಲಭೆಯ ಸಿಡಿಗುಂಡಿನ ಧೂಮ
ನೋಯ್ವರ ಸಾಯ್ವರ ನರಳಾಟ
ಈ ಗಲಭೆಯೊಳುರುಳಿ ಬೀಳುವರು ಲಿಂಕನ್ ಗಾಂಧಿ ಕೆನಡಿ
ಹೀಗೆ ಮೊದಲಿಂದಲೂ ಒಡೆಯುತ್ತಿದೆ ಕನ್ನಡಿ.

ಪ್ರಶ್ನೆಗಳು :

(1) ಗಡಿಗಳನ್ನು ಕಾಯುತ್ತಿರುವವರು ______. **1**

(A) ರಾಜರು (B) ಗುಲಾಮರು

(C) ಸೈನಿಕರು (D) ಮಾಲೀಕರು

(2) ಬದುಕು ಎಂತಹ ಯುದ್ಧವಾಗಿದೆ ? **1**

(3) 'ಹೆಜ್ಜೆ ಹೆಜ್ಜೆ'

ಈ ಮೇಲಿನ ದ್ವಿರುಕ್ತಿಯಂತೆ ಇನ್ನೆರಡು ದ್ವಿರುಕ್ತಿಗಳನ್ನು ಬರೆಯಿರಿ. **2**

(4) ಗಲಭೆಯಲ್ಲಿ ಉರುಳಿ ಬೀಳುವವರು ಯಾರು ಯಾರು ? **2**

**14.** ಗಂಡನಿಗೆ ಇದಿರಾಡಿದ ಸಾಧ್ವಿ ಯಾರು ? **1**

**15.** ಬೆಳಗಿನ ಜಾವ ಎಂಬುದನ್ನು ಕೆಲವರು ಹೇಗೆ ಉಚ್ಚರಿಸುತ್ತಾರೆ ? **1**

**16.** ಕ್ಷೀಣತೆ ಯಾವುದಕ್ಕೆ ಇರುವುದಿಲ್ಲ ? **1**

**17.** ಕಥಾನಾಯಕ ಯಾವ ಪದವಿಯನ್ನು ಪಡೆದಿದ್ದ ? **1**

**18.** (A) ಟೆಲಿಕಮ್ಯೂಟಿಂಗ್ ಎಂದರೇನು ? **1**

(B) ಸಿದ್ಧಲಿಂಗಯ್ಯ ಅವರು ಯಾವ ಸಾಹಿತ್ಯ ಪ್ರಕಾರದ ಕವಿ ? **1**

**19.** ಕೆಳಗಿನವುಗಳಿಗೆ ಉತ್ತರಿಸಿರಿ.

(A) ಇಲ್ಲಿರುವ ಪದಗಳಲ್ಲಿ ಯಾವುದಾದರೂ ಎರಡನ್ನು ಬಿಡಿಸಿ ಬರೆಯಿರಿ. **2**

(1) ಕಾರ್ಮೋಡ (2) ಕತ್ತೆತ್ತಿ (3) ಹೆಬ್ಬಂಡೆ

**ಅಥವಾ**

'ಇಂದ' ಪ್ರತ್ಯಯ ಸೇರಿಸಿ ಎರಡು ಶಬ್ದ ಮಾಡಿರಿ.

(B) ಇಲ್ಲಿರುವ ಪದಗಳಲ್ಲಿ ಯಾವುದಾದರೂ ಎರಡನ್ನು ಕೂಡಿಸಿ ಬರೆಯಿರಿ. **2**

(1) ಪ್ರತಿ **+** ಉತ್ತರ

(2) ಹಿರಿದು **+** ದಾರಿ

(3) ಕೆಂಪಾದ **+** ಬಣ್ಣ

**ಅಥವಾ**

'ಗಾರ' ಪ್ರತ್ಯಯಕ್ಕೆ ಸಂಬಂಧಿಸಿ – ಎರಡು ಶಬ್ದ ಬರೆಯಿರಿ.

(C) ಕೆಳಗೆ ಕೊಟ್ಟಿರುವ ಶಬ್ದಗಳಲ್ಲಿ ಯಾವುದಾದರೂ ಎರಡಕ್ಕೆ ಒಂದೊಂದು ವಿರುದ್ಧ ಪದ ಬರೆಯಿರಿ. **2**

(1) ಮೇಲೆ (2) ಸ್ತುತಿ (3) ಹೊಗಳು

**ಅಥವಾ**

ಕೊಟ್ಟಿರುವ ವಾಕ್ಯಗಳಲ್ಲಿ ಗೆರೆ ಎಳೆದಿರುವ ಶಬ್ದಕ್ಕೆ ಸಮಾನಾರ್ಥಕ ಪದ ಬರೆಯಿರಿ.

(1) ದೇವರಿಗೆ <u>ಭಯ</u> ಪಡಬೇಕು.

(2) ಸಹಾಯ ಮಾಡಿದ ನಿಮ್ಮ <u>ಗೆಳೆಯ</u>ನನ್ನು ಮರೆಯದಿರಿ.

**20.** ಕೆಳಗೆ ಕೊಟ್ಟಿರುವ ನುಡಿಗಟ್ಟುಗಳಲ್ಲಿ ಯಾವುದಾದರೂ ಎರಡನ್ನು ನಿಮ್ಮ ವಾಕ್ಯಗಳಲ್ಲಿ ಪ್ರಯೋಗಿಸಿರಿ. **2**

(1) ಕಣ್ಣೀರು ಸುರಿಸು (2) ಮೊರೆಯಿಡು (3) ಕರುಳ ಕುಡಿ

21. ‘ಲೋಕೈಕ’ ಈ ಪದವು ಯಾವ ಸಂಧಿಯ ನಿಯಮದಲ್ಲಿ ಬರುತ್ತದೆ ? **1**

22. ರಾವಣ ಸೀತೆಗೆ ಏನನ್ನು ನೀಡಲು ಬಯಸುತ್ತಾನೆ ? ಏಕೆ ? **4**

23. ಸೀತೆ – ಮಂಡೋದರಿಯರ ಪಾತ್ರವನ್ನು ಚಿತ್ರಿಸಿ. **5**

24. ತೆಂಕಣನಾಡನ್ನು ಮರೆಯುವುದಕ್ಕೆ ಏಕೆ ಮನಸ್ಸಾಗುವುದಿಲ್ಲ ? **5**

ಅಥವಾ

‘ಮೈಲಿ’ ರೋಗದಿಂದ ಉಂಟಾಗುವ ಗಂಭೀರ ಪರಿಣಾಮಗಳೇನು ?

25. ಕೆಳಗಿರುವ ಜೋಡು – ನುಡಿಗಳಲ್ಲಿ ಯಾವುದಾದರೂ ಎರಡಕ್ಕೆ ಅರ್ಥಪೂರ್ಣವಾದ ವಾಕ್ಯಗಳನ್ನು ರಚಿಸಿರಿ. **2 + 2 = 4**

(A) ಕಾಡು – ಮೇಡು

(B) ತಿಂಡಿ – ತಿನಿಸು

(C) ಬಡವ – ಬಲ್ಲಿದ

26. ಮೈಸೂರು ವಿಶ್ವವಿದ್ಯಾಲಯ, ಇಲ್ಲಿ ದಾಖಲಾದ ಅಧ್ಯಯನ ಕೇಂದ್ರಗಳ ಸಂಖ್ಯೆಯನ್ನು ಕೊಡಲಾಗಿದೆ. ಅದರ ಸಹಾಯದಿಂದ ರೇಖಾಚಿತ್ರವನ್ನು ರಚಿಸಿರಿ. **5**

| ವರ್ಷ | 1978 | 1979 | 1980 | 1981 | 1982 | 1983 | 1984 | 1985 | 1986 | 1987 |
|---|---|---|---|---|---|---|---|---|---|---|
| ಅಧ್ಯಯನ ಕೇಂದ್ರಗಳು | 9 | 10 | 12 | 13 | 15 | 18 | 24 | 25 | 26 | 30 |

ಅಥವಾ

ನೀವು ನಿತಿನ್, ತಂದೆ ಯಲ್ಲಪ್ಪ, ಊರು – ಬಾಗಲಕೋಟೆ, ಎಂ. ಕಾಂ. ಪದವೀಧರರು ಎಂದು ಭಾವಿಸಿ ಕೆಳಗಿನ ಅರ್ಜಿಯನ್ನು ಭರ್ತಿ ಮಾಡಿರಿ.

**ಉದ್ಯೋಗಕ್ಕಾಗಿ ಅರ್ಜಿ**

ಗೆ,

ಮ್ಯಾನೇಜಿಂಗ್ ಡೈರೆಕ್ಟರ್

ಇನ್‌ಫೋಸಿಸ್ ಕಂಪನಿ

ಬೆಂಗಳೂರು

**ಉದ್ಯೋಗದ ಹೆಸರು – ಮ್ಯಾನೇಜರ್**

| | | |
|---|---|---|
| ಹೆಸರು | : | ____________________________________ |
| ತಂದೆ | : | ____________________________________ |
| ಜನ್ಮಸ್ಥಳ | : | ____________________________________ |
| ಹುಟ್ಟಿದ ದಿನಾಂಕ | : | ____________________________________ |
| ಪೂರ್ಣ ವಿಳಾಸ | : | ____________________________________ |
| ರಾಷ್ಟ್ರೀಯತೆ | : | ____________________________________ |
| ಮತ / ಜಾತಿ | : | ____________________________________ |
| ವಿದ್ಯಾರ್ಹತೆ | : | ____________________________________ |
| ಅನುಭವ | : | ____________________________________ |
| ಓದಿದ ಶಾಲೆಯಿಂದ ದೃಢೀಕರಣ ಪತ್ರ | : | ____________________________________. |
| ಬ್ಯಾಂಕ್ /ಅಂಚೇ ಕಛೇರಿಯ ಹೆಸರು | : | ____________________________________. |
| ಖರೀದಿಸಿದ ಡಿ.ಡಿ./ಪಿ.ಓ. ನಂ. | : | ____________________________________. |

ಮೇಲ್ಕಂಡ ವಿಷಯಗಳಿಗೆ ಸಂಬಂಧಿಸಿದ ಸರ್ಟಿಫಿಕೇಟುಗಳನ್ನು ಲಗತ್ತಿಸಿದ್ದೇನೆ. ನಾನು ಸಲ್ಲಿಸುತ್ತಿರುವ ಅರ್ಜಿಯಲ್ಲಿನ ವಿಚಾರಗಳು ಸತ್ಯವಾಗಿವೆ ಎಂದು ಪ್ರಮಾಣೀಕರಿಸುತ್ತೇನೆ.

ಧನ್ಯವಾದಗಳು

ತಮ್ಮ ವಿಧೇಯ

ಹಸ್ತಾಕ್ಷರ

(ಹೆಸರು)

**27.** ಭರತಭೂಮಿಯ ಸಿರಿ ಸಂಪತ್ತನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ. **5**

**28.** ಕೆಳಗಿನ ವಾಕ್ಯಗಳನ್ನು ಓದಿ, ಸೂಚಿಸಿರುವಂತೆ ಬರೆಯಿರಿ. **1 × 5 = 5**

(1) ಲಖಕರು ಬೆಂಗಿಳೂರೊಗೆ ವಗವಾದರ.

(ಶುದ್ಧರೂಪದಲ್ಲಿ ಬರೆಯಿರಿ)

(2) ನಾವೆಲ್ಲರೂ ದೇವರ ದೃಷ್ಟಿಯಲ್ಲಿ ಅಮೂಲ್ಯರು :

ಅಮೂಲ್ಯರು ಇದರ ಏಕವಚನ ರೂಪ _______

(3) ಜಾತಿ – ಗೀತಿ : ಜೋಡಿಪದ :: ಅಲ್ಲಲ್ಲಿ : _______

(4) ಸಚಿನ್ ಶಾಲೆಯಿಂದ ಬಂದು ಪಾಠ ಓದಿದನು.

(ಭವಿಷತ್ ಕಾಲಕ್ಕೆ ಪರಿವರ್ತಿಸಿರಿ)

(5) ಆಹಾ ದೇವರ ಸೃಷ್ಟಿ ಅಗಾಧ .. .. .. ..

(ಇಲ್ಲಿ ಇರಬೇಕಾದ ಲೇಖನ ಚಿಹ್ನೆಗಳು)

**29.** ಡಾ॥ ಸುಧಾಮೂರ್ತಿಯವರು ಬರೆದ "ಸ್ವತಃ ನೀವೇ ನಿಮ್ಮ ದೀಪ" ಪುಸ್ತಕವನ್ನು ಕಳುಹಿಸಿ ಕೊಡುವಂತೆ ಕೋರಿ ವ್ಯವಸ್ಥಾಪಕರು, ಮಾನಸಾ ಪುಸ್ತಕಾಲಯ ಯಳಂದೂರು, ಇವರಿಗೆ ಒಂದು ಪತ್ರ ಬರೆಯಿರಿ. **7**

**ಅಥವಾ**

ತುಮಕೂರಿನಲ್ಲಿರುವ ವಸತಿ ಶಾಲೆಯೊಂದರಲ್ಲಿ 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಪೂರ್ವಿಕಾ / ಪೂರ್ವಿಕ್ ಎಂದು ಭಾವಿಸಿ, ಕುವೆಂಪು ನಗರ ಮಧುಗಿರಿಯಲ್ಲಿರುವ ನಿಮ್ಮ ತಾಯಿಯವರಿಗೆ ನಿಮ್ಮ ದಿನಚರಿ ಕುರಿತು ಒಂದು ಪತ್ರ ಬರೆಯಿರಿ.

**30.** ಈ ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಕುರಿತು **50** ಶಬ್ದಗಳಿಗೆ ಮೀರದಂತೆ ಬರೆಯಿರಿ. **5**

(1) ಮಿಂಚಿ ಹೋದ ಕಾಲಕ್ಕೆ ಚಿಂತಿಸಿ ಫಲವೇನು ?

(2) ದೂರದ ಬೆಟ್ಟ ಕಣ್ಣಿಗೆ ನುಣ್ಣಗೆ

(3) ಮಾತು ಬೆಳ್ಳಿ ಮೌನ ಬಂಗಾರ

**31.** ಈ ಕೆಳಗಿನ ವಿಷಯಗಳಲ್ಲಿ ಯಾವುದಾದರೂ ಒಂದನ್ನು ಕುರಿತು **200** ಶಬ್ದಗಳಿಗೆ ಮೀರದಂತೆ ಪ್ರಬಂಧವನ್ನು ಬರೆಯಿರಿ. **10**

(1) ಆಧುನಿಕ ಶಿಕ್ಷಣ ಪದ್ಧತಿ

(2) ನನ್ನ ನೆಚ್ಚಿನ ರಾಷ್ಟ್ರನಾಯಕ

(3) ಸ್ವಚ್ಛ ಭಾರತ ಮಿಷನ್